KACD310015482021

Presented on : 13.07.2021
Registered on : 13.07.2021
Decided on : 01.04.2026
Duration : 4y - 8M- 19Days

**ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ,ಹಿರಿಯೂರು.**

ಉಪಸ್ಥಿತರುಃ– ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಹಿರಿಯೂರು.

**ಸಿ ಸಿ. ನಂಬರ್ 1187/2021**

ದಿನಾಂಕಃ 01 ನೇ ಏಪ್ರಿಲ್ – 2026.

**ಪಿರ್ಯಾದಿ** ಃ ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ
ಆರಕ್ಷಕರು, ಹಿರಿಯೂರು
(ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು)

– ವಿರುದ್ಧ –

**ಆರೋಪಿ** ಃ **ಗೋಪಾಲಪ್ಪ ಸಿ .**
ತಂದೆ ಚಿಕ್ಕಣ್ಣ , 45 ವರ್ಷ,
ಎಪಿ.39.ಬಿಜಡ್.4826 ರ ಮೋಟಾರ್ ಸೈಕಲ್ ಸವಾರ,
ವಾಸಃ ಯಲ್ಲದಕೆರೆ, ಕೆ ಕೆ. ಹಟ್ಟಿಗ್ರಾಮ,
ಹಿರಿಯೂರು ತಾಲೂಕು.

(ಆರೋಪಿತರ ಪರವಾಗಿಃ ಶ್ರೀ ಆರ್.ಟಿ.ಎಸ್ ವಕೀಲರು)

ಆರೋಪಿಸಲ್ಪಟ್ಟ ಅಪಾದನೆ ಃ ಭಾ.ದಂ.ಸಂ. ಕಲಂ 279, 304(ಎ)

SUJATHA SUVARNA B
Digitally signed by SUJATHA SUVARNA B
Date: 2026.04.05 09:52:50 +0530

| | |
|---|---|
| ಆರೋಪದ ದಿನಂಕ | ಃ 02.10.2020 |
| ಆರೋಪ ದಾಖಲಾದ ದಿನಾಂಕ | ಃ 03.10.2020 |
| ಸಾಕ್ಷ್ಯಪ್ರಾರಂಭದ ದಿನಾಂಕ | ಃ 11.09.2023 |
| ಸಾಕ್ಷ್ಯಮುಕ್ತಾಯ ಗೊಂಡ ದಿನಾಂಕ | ಃ 26.11.2024 |
| ತೀರ್ಪು ಘೋಷಿಸಿದ ದಿನಾಂಕ | ಃ 01.04.2026 |
| ನ್ಯಾಯಾಧೀಶರ ನಿರ್ಣಯ | ಃ ಅಂತಿಮ ಆದೇಶ |

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

**ತೀರ್ಪು**

ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ ಆರಕ್ಷಕ ವೃತ್ತ ನಿರೀಕ್ಷಕರು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 279 ಮತ್ತು 304(ಎ) ರಡಿಯಲ್ಲಿ ದಂಡಿಸಬಹುದಾದ ಕೃತ್ಯಗಳನ್ನು ಎಸಗಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನಾ ಪರ ಪ್ರಕರಣದ ಸಂಕ್ಷಿಪ್ತ ವಿವರಣೆ ಈ ಕೆಳಕಂಡಂತಿರುತ್ತವೆ.

ದಿನಾಂಕಃ 02.10.2020 ರಂದು ರಾತ್ರಿ 8.15 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಯಲ್ಲದಕೆರೆ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಕೆ.ಕೆ ಹಟ್ಟಿ ಗ್ರಾಮದ ರಸ್ತೆಯಲ್ಲಿ ಆರೋಪಿಯು ತಮ್ಮ ಬಾಬ್ತು ಎಪಿ.39.ಬಿಜಡ್.4826 ರ ಮೋಟಾರ್ ಸೈಕಲ್ ನ್ನು ಮನುಷ್ಯನ ಪ್ರಾಣಕ್ಕೆ ಅಪಾಯವುಂಟಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಜಂಗ್ಲಿ ಈರಪ್ಪ ರವರಿಗೆ ಡಿಕ್ಕಿಪಡಿಸಿದ ಪರಿಣಾಮ ಅವರ ಎಡಗಾಲಿಗೆ, ಸೊಂಟಕ್ಕೆ ಮೈಕೈಗೆ ಪೆಟ್ಟುಗಳು ಬಿದ್ದು

ಹಿರಿಯೂರು, ಚಿತ್ರದುರ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದರೂ ಗುಣಮುಖರಾಗದೇ ದಿಃ 24.10.2020 ರಂದು ರಾತ್ರಿ 8.30 ರ ಸಮಯದಲ್ಲಿ ಸೀಗೆಹಟ್ಟಿ ಗ್ರಾಮದ ತನ್ನ ಮನೆಯಲ್ಲಿ ಮೃತಪಟ್ಟಿರುತ್ತಾರೆಂದು ಪಿರ್ಯಾದಿದಾರರು ದೂರು ನೀಡಿದ್ದು ಸದರಿ ದೂರಿನ ಮೇರೆಗೆ ತನಿಖಾಧಿಕಾರಿಗಳು ತನಿಖೆ ಮಾಡಿ ಆರೋಪಿ ಭಾ.ದಂ.ಸಂಹಿತೆ ಕಲಂ 279, 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾನೆಂದು ದೋಷಾರೋಪಣಾಪಟ್ಟಿ ಸಲ್ಲಿಸಲಾಗಿರುತ್ತದೆ.

3. ನ್ಯಾಯಾಲಯವು ಆರೋಪಿಯ ಮೇಲೆ ಇರುವ ಅಪರಾಧದ ಬಗ್ಗೆ ಸಂಜ್ಞೆ ತೆಗೆದುಕೊಂಡಿದ್ದು ಅವರಿಗೆ ಸಮನ್ಸ್ ಜಾರಿಯಾದ ನಂತರ ತಮ್ಮ ವಕೀಲರ ಮೂಲಕ ಆರೋಪಿತನು ನ್ಯಾಯಾಲಯಕ್ಕೆ ಹಾಜರಾಗಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿದ್ದು ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅನ್ವಯ ಅಭಿಯೋಜನೆಯ ಈ ಪ್ರಕರಣದ ಸಮಸ್ತ ದಾಖಲೆಗಳನ್ನು ಆರೋಪಿತರಿಗೆ ನೀಡಲಾಯಿತು.

4. ನ್ಯಾಯಾಲಯವು ದೋಷಾರೋಪಣೆಯನ್ನು ತಯಾರಿಸಿ ಆರೋಪಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಲಾಯಿತು. ಆರೋಪಿಯು ಅದನ್ನು ಒಪ್ಪದೇ ವಿಚಾರಣೆಯಾಗಬೇಕೆಂದು ವಿನಂತಿಸಿಕೊಂಡಿದ್ದರಿಂದ ಈ ಪ್ರಕರಣವನ್ನು ವಿಚಾರಣೆ ಮಾಡಲು ಸಹಾಯಕ ಸರಕಾರಿ ಅಭಿಯೋಜನೆಯವರಿಗೆ ಅವಕಾಶ ಮಾಡಿಕೊಡಲಾಯಿತು.

5. ಅಭಿಯೋಜನಾ ಪಕ್ಷದವರು ತಮ್ಮ ಈ ಪ್ರಕರಣದ ಸಮರ್ಥನೆಗಾಗಿ ಸಾಕ್ಷಿದಾರರಾದ ಚಾಸಾ–1 ರಿಂದ 15 ರ ಪೈಕಿ ಚಾಸಾ.1, 3, 4, 5, 13, 2, 12 ಮತ್ತು 15 ರವರನ್ನು ಫ್ರಾಸಾ.1 ರಿಂದ 8 ರಂತೆ ಸಾಕ್ಷಿ ವಿಚಾರಣೆ ಮಾಡಿಕೊಂಡಿರುತ್ತಾರೆ ಹಾಗೂ ನಿಪಿ.1 ರಿಂದ

ನಿಪಿ.20 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆ ಸಾಕ್ಷಿಗಳು ಮುಕ್ತಾಯವಾದ ನಂತರ ದಂ.ಪ್ರ.ಸಂ ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಪಡೆಯಲಾಯಿತು. ಆರೋಪಿತರು ಸಾಕ್ಷಿಯಲ್ಲಿಯ ಅಂಶಗಳನ್ನು ನಿರಾಕರಿಸಿ ತಮ್ಮ ಪರವಾಗಿ ಯಾವುದೇ ಸಾಕ್ಷಿ ಇಲ್ಲವೆಂದು ವಿನಂತಿಸಿಕೊಂಡರು. ಆರೋಪಿತರು ಅಭಿಯೋಜನೆಯವರ ವಿರುದ್ಧ ಹಾಜರುಪಡಿಸಿದ ಸಾಕ್ಷ್ಯದಾರಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ, ಆದರೆ ತಮ್ಮ ಪರವಾಗಿ ಯಾವ ರಕ್ಷಣಾತ್ಮಕ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ .

6. ಅಭಿಯೋಜನಾ ಪಕ್ಷದವರ ಪರ ಹಾಗೂ ಆರೋಪಿತರ ಪರ ವಾದವನ್ನು ಕೇಳಲಾಯಿತು.

7. ಸಾಕ್ಷಿದಾರರ ಹೇಳಿಕೆ ಹಾಗೂ ವಕೀಲರ ವಾದ ಈ ಎಲ್ಲಾ ವಿಷಯವನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ ಈ ಕೆಳಗಿನ ಅಂಶಗಳು ನ್ಯಾಯಾಲಯದ ಅವಗಾಹನೆಗೆ ಮೂಡಿ ಬಂದಿರುತ್ತದೆ.

1. ಅಭಿಯೋಜನೆಯು ದಿನಾಂಕಃ 02.10.2020 ರಂದು ರಾತ್ರಿ 8.15 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಯಲ್ಲದಕೆರೆ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಕೆ.ಕೆ ಹಟ್ಟಿ ಗ್ರಾಮದ ರಸ್ತೆಯಲ್ಲಿ ಆರೋಪಿಯು ತಮ್ಮ ಬಾಬ್ತು ಎಪಿ.39.ಬಿಜಡ್.4826 ರ ಮೋಟಾರ್ ಸೈಕಲ್ ನ್ನು ಮನುಷ್ಯನ ಪ್ರಾಣಕ್ಕೆ ಅಪಾಯವುಂಟಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಜಂಗ್ಲಿ ಈರಪ್ಪ ರವರಿಗೆ ಡಿಕ್ಕಿಪಡಿಸಿದ್ದು ಆದ್ದರಿಂದ ಭಾ.ದಂ.ಸಂ.ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾನೆಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುವರೇ?

2. ಅಭಿಯೋಜನೆಯು, ಸದರಿ ದಿನಾಂಕ, ವೇಳೆ ಮತ್ತು ಸ್ಥಳದಂದು ಆರೋಪಿಯು ಮೇಲ್ಕಂಡ ಮೋಟರ್ ಸೈಕಲ್‌ನ್ನು ನಿರ್ಲಕ್ಷತನದಿಂದ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಜಂಗ್ಲಿ ಈರಪ್ಪ ರವರಿಗೆ ಡಿಕ್ಕಿ ಪಡಿಸಿದ ಪರಿಣಾಮ ಅವರ ಎಡಗಾಲಿಗೆ, ಸೊಂಟಕ್ಕೆ ಮೈಕೈಗೆ ಪೆಟ್ಟುಗಳು ಬಿದ್ದು ಹಿರಿಯೂರು, ಚಿತ್ರದುರ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದರೂ ಗುಣಮುಖರಾಗದೇ ದಿಃ 24.10.2020 ರಂದು ರಾತ್ರಿ 8.30 ರ ಸಮಯದಲ್ಲಿ ಸೀಗೆಹಟ್ಟಿ ಗ್ರಾಮದ ತನ್ನ ಮನೆಯಲ್ಲಿ ಮೃತಪಟ್ಟಿರುತ್ತಾರೆ ಆದ್ದರಿಂದ ಭಾ.ದಂ.ಸಂ.ಕಲಂ 304(ಎ) ರಡಿಯಲ್ಲಿ ಆರೋಪಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುವರೇ?

3. ಆದೇಶ ಏನು?

8. ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಿದ್ದೇನೆಃ-

ಅಂಶ ನಂ.1 ಮತ್ತು 2 ಃ ನಕಾರಾತ್ಮಕವಾಗಿ
ಅಂಶ ನಂ.3 ಃ ಅಂತಿಮ ಆದೇಶದಂತೆ ಈ ಕೆಳಗೆ ಕಾಣಿಸಿರುವ

**ಃಃಕಾರಣಗಳುಃಃ**

**ಅಂಶ ನಂ.1 ಮತ್ತು 2ಃ** ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ವಿಷಯದ ಪುನಾವರ್ತನೆಯನ್ನು ತಡೆಗಟ್ಟುವ ಉದ್ದೇಶದಿಂದ ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಂಡಿದೆ.

9. ಅಭಿಯೋಜನೆಯವರು ಚಾಸಾ.1 ರವರನ್ನು ಫ್ರಾಸಾ.1 ಎಂದು, ಚಾಸಾ.3 ರವರನ್ನು ಫ್ರಾಸಾ.2 ಎಂದು, ಚಾಸಾ.4 ರವರನ್ನು ಫ್ರಾಸಾ.3 ಎಂದು, ಚಾಸಾ.5 ರವರನ್ನು

ಫ್ರಾಸಾ.4 ಎಂದು, ಚಾಸಾ.13 ರವರನ್ನು ಫ್ರಾಸಾ.5, ಚಾಸಾ.2 ರವರನ್ನು ಫ್ರಾಸಾ.6, ಚಾಸಾ.12 ರವರನ್ನು ಫ್ರಾಸಾ.7 ಹಾಗೂ ಚಾಸಾ.15 ರವರನ್ನು ಫ್ರಾಸಾ.8 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ ಹಾಗೂ ನಿಪಿ.1 ರಿಂದ 20 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ವನಿ.ಪಿ–1 ದೂರು, ನಿ.ಪಿ–1(ಎ) ಫ್ರಾಸಾ.1 ರವರ ಸಹಿ, ನಿ.ಪಿ–1(ಬಿ) ಫ್ರಾಸಾ.2 ರವರ ಸಹಿ , ನಿ.ಪಿ–1(ಸಿ) ಫ್ರಾಸಾ.7 ರವರ ಸಹಿ, ನಿ.ಪಿ–2 ಪಿರ್ಯಾದಿಯ ಮರು ದೂರು, ನಿ.ಪಿ–2(ಎ) ಫ್ರಾಸಾ.1 ರವರ ಸಹಿ, ನಿ.ಪಿ–2(ಬಿ) ಫ್ರಾಸಾ.3 ರವರ ಸಹಿ, ನಿ.ಪಿ–3 ಸ್ಥಳ ಪಂಚನಾಮೆ, ನಿ.ಪಿ–3(ಎ) ಫ್ರಾಸಾ.1 ರವರ ಸಹಿ , ನಿ.ಪಿ–3(ಬಿ) ಫ್ರಾಸಾ.3 ರವರ ಸಹಿ, ನಿ.ಪಿ–3(ಸಿ) ಫ್ರಾಸಾ.4 ರವರ ಸಹಿ, ನಿ.ಪಿ–3(ಡಿ) ಫ್ರಾಸಾ.7 ರವರ ಸಹಿ, ನಿ.ಪಿ–4 ಕಚ್ಚಾ ನಕಾಶೆ, ನಿ.ಪಿ–4(ಎ) ಫ್ರಾಸಾ.1 ರವರ ಸಹಿ, ನಿ.ಪಿ–4(ಬಿ) ಫ್ರಾಸಾ.3 ರವರ ಸಹಿ, ನಿ.ಪಿ–4(ಸಿ) ಫ್ರಾಸಾ.4 ರವರ ಸಹಿ, ನಿ.ಪಿ–4(ಡಿ) ಫ್ರಾಸಾ.7 ರವರ ಸಹಿ, ನಿ.ಪಿ–5 ರಿಂದ 9 ಛಾಯಾಚಿತ್ರಗಳು, ನಿ.ಪಿ–10 ವಾಹನ ಪರಿಶೀಲನಾ ಪಂಚನಾಮೆ, ನಿ.ಪಿ–10(ಎ) ಫ್ರಾಸಾ.2 ರವರ ಸಹಿಯಾಗಿರುತ್ತದೆ

10. ನಿ.ಪಿ–11 ಫ್ರಾಸಾ.2 ರವರ ಹೇಳಿಕೆ, ನಿ.ಪಿ–12 ಮನವಿ ಪತ್ರ, ನಿ.ಪಿ–12(ಎ) ಫ್ರಾಸಾ.2 ರವರ ಸಹಿ, ನಿ.ಪಿ–13 ಫ್ರಾಸಾ.6 ರವರ ಹೇಳಿಕೆ, ನಿ.ಪಿ–14 ಫ್ರಾಸಾ.6 ರವರ ಹೆಚ್ಚುವರಿ ಹೇಳಿಕೆ, ನಿ.ಪಿ–15 ಪ್ರ.ವ ವರದಿ, ನಿ.ಪಿ–15(ಎ) ಫ್ರಾಸಾ.7 ರವರ ಸಹಿ, ನಿ.ಪಿ–16 ಶವ ಪರೀಕ್ಷೆ ವರದಿ, ನಿ.ಪಿ–16(ಎ) ಫ್ರಾಸಾ.8 ರವರ ಸಹಿ, ನಿ.ಪಿ–17 ಐ ಎಂ ವಿ ವರದಿ, ನಿ.ಪಿ–17(ಎ) ಫ್ರಾಸಾ.8 ರವರ ಸಹಿ, ನಿ.ಪಿ–18 ಕಲಂ 133 ಐ.ಎಂ.ವಿ ಆಕ್ಟ್ ನೊಟೀಸ್, ನಿ.ಪಿ–18(ಎ) ಫ್ರಾಸಾ.8 ರವರ ಸಹಿ, ನಿ.ಪಿ–19 ನೋಟಿಸ್ ಗೆ ನೀಡಿದ ಉತ್ತರ, ನಿ.ಪಿ–19(ಎ) ಫ್ರಾಸಾ.8 ರವರ ಸಹಿ, ನಿ.ಪಿ–20 ಇಂಡೆಮ್ನಿಟಿ ಬಾಂಡ್, ನಿ.ಪಿ–20(ಎ) ಫ್ರಾಸಾ.8 ರವರ ಸಹಿ ಆಗಿರುತ್ತದೆ.

**11.** ಕಲಂ **279** ರ ಪ್ರಕಾರ ಯಾವುದೇ ಒಬ್ಬ ವ್ಯಕ್ತಿಯು ಮನುಷ್ಯನ ಪ್ರಾಣಕ್ಕೆ ಅಪಾಯವಾಗುವಂತೆ ಅಥವಾ ಯಾವನೆ ಇತರೇ ವ್ಯಕ್ತಿಗೆ ಗಾಯ ಮತ್ತು ಕೃತ್ಯವನ್ನುಂಟುಮಾಡುವ ಹಾಗೆ ಸಾರ್ವಜನಿಕ ರಸ್ತೆಯಲ್ಲಿ ದುಡುಕಿನಿಂದ ಅಥವಾ ನಿರ್ಲಕ್ಷದಿಂದ ವಾಹನ ನಡೆಸಿದರೆ ಅವನು ಶಿಕ್ಷೆಗೆ ಒಳಗಾಗಬೇಕಾಗುತ್ತದೆ ಹಾಗೂ ಕಲಂ **304**(ಎ) ಪ್ರಕಾರ ಈ ರೀತಿ ದುಡುಕು ಅಥವಾ ನಿರ್ಲಕ್ಷದಿಂದ ಇತರ ವೈಯಕ್ತಿಕ ಸುರಕ್ಷತೆಗೆ ಅಪಾಯ ಉಂಟುಮಾಡಿ ಯಾವುದೇ ವ್ಯಕ್ತಿಯ ಮರಣ ಉಂಟು ಮಾಡಿದಲ್ಲಿ ಶಿಕ್ಷೆಗೆ ಒಳಪಡಬೇಕಾಗುತ್ತದೆ.

**12.** ಚಾಸಾ.1/ಪ್ರಾಸಾ.1 ಶಿವಕುಮಾರ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮೃತ ಜಂಗ್ಲಿ ಈರಪ್ಪ ಅವರ ತಂದೆ ಅವರು ರಸ್ತೆ ಅಪಘಾತದಲ್ಲಿ ಮೃತ ಪಟ್ಟಿರುತ್ತಾರೆಂದು ಅಂದಾಜು 2-3 ವರ್ಷಗಳ ಹಿಂದೆ ರಾತ್ರಿ ಸಮಯದಲ್ಲಿ ಹುಳಿಯಾರಿಗೆ ಹೋಗಿದ್ದು ಮರು ದಿನ ಬೆಳಿಗ್ಗೆ ರಸ್ತೆ ಅಪಘಾತವಾಗಿದೆ ಎಂದು ಅವರಿಗೆ ತಿಳಿಸಿದರೆಂದು ಮಹೇಶ್ ಎಂಬ ವ್ಯಕ್ತಿ ಪೋನ್ ನಲ್ಲಿ ಅಪಘಾತದ ವಿಷಯ ತಿಳಿಸಿದರೆಂದು ವಿಷಯ ತಿಳಿದ ತಕ್ಷಣ ಅವರು ಸ್ಥಳಕ್ಕೆ ಹೋಗಿ ಅವರ ತಂದೆ ಅಪಘಾತದಲ್ಲಿ ಅವರ ಎಡಗಾಲಿಗೆ ಏಟಾಗಿ ಕೆಳಗೆ ಬಿದ್ದಿದ್ದರು ಎಂದು ಅವರ ತಂದೆಗೆ ಬೈಕ್ ನಿಂದ ಅಪಘಾತವಾಗಿದೆ ಎಂದು ಗೊತ್ತಾಗಿದ್ದು ಎಂದು ಅವರ ತಂದೆಗೆ ಚಿಕಿತ್ಸೆಗಾಗಿ ಯಲ್ಲದಕೆರೆ ಸರ್ಕಾರಿ ಆಸ್ಪತ್ರೆಗೆ ನಂತರ ಹಿರಿಯೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಗೆ ಕರೆದುಕೊಂಡು ಹೋಗಿರುತ್ತಾರೆಂದು ಆ ನಂತರ ನಾಟಿ ಚಿಕಿತ್ಸೆಗಾಗಿ ಅವರ ತಂದೆಗೆ ಹರಪ್ಪನಹಳ್ಳಿಗೆ ಕರೆದುಕೊಂಡು ಹೋಗಿರುತ್ತಾರೆಂದು ಅಪಘಾತದ ಬಗ್ಗೆ ಅವರು ಪೊಲೀಸರಿಗೆ ನಿಪಿ-1 ರಂತೆ ಒಂದು ದೂರು ನೀಡಿರುತ್ತಾರೆಂದು ಅಂದಾಜು 2 ವರ್ಷಗಳ ಹಿಂದೆ ಸದರಿ ದೂರು ಕೊಟ್ಟಿರುತ್ತಾರೆಂದು ದೂರನ್ನು ಅವರು ಹೇಳಿದಂತೆ ನಾಗರಾಜ್ ಬರೆದಿರುತ್ತಾರೆಂದು ನಿಪಿ-2 ಹೆಚ್ಚುವರಿ ದೂರು ಎಂದು ಅಪಘಾತವಾದ 15 ದಿನ ನಂತರ ಅವರ ತಂದೆ ಮೃತ ಪಟ್ಟಿದ್ದು ಆ

ಬಗ್ಗೆ ನಿಪಿ–2 ದಾಖಲಿಸಿರುತ್ತಾರೆಂದು ನಿಪಿ–3 ಮತ್ತು 4 ರಂತೆ ಸ್ಥಳ ಮಹಜರ್ ಮತ್ತು ನಕಾಶೆ ಈ ಎರಡು ದಾಖಲೆಗಳಿಗೆ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಾಗ್ಗಿ ಸಹಿ ಮಾಡಿರುತ್ತಾರೆಂದು ಪೊಲೀಸ್ ಠಾಣೆಯಲ್ಲಿ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆಂದು ಅವರ ಜೊತೆ ಸದರಿ ದಾಖಲೆಗೆ ರಂಗಪ್ಪ ಮತ್ತು ಶಾಂತಕುಮಾರ್ ಸಹಿ ಮಾಡಿರುತ್ತಾರೆಂದು ನಿಪಿ–5 ರಂತೆ ಪೋಟೋ ಅವರದೆಂದು ಸದರಿ ಪೋಟೋವನ್ನು ಪೊಲೀಸರು ಅಪಘಾತದ ಸ್ಥಳದಲ್ಲಿ ತೆಗೆಸಿದ್ದಾರೆ ನಿಪಿ–6 ರಿಂದ 9 ರಂತೆ ಇನ್ನು 4 ಪೋಟೋಗಳನ್ನು ತೋರಿಸಿದಾಗ ಅವುಗಳನ್ನು ನೋಡಿ ಅದರಲ್ಲಿರುವ ವಾಹನದಿಂದಲೇ ಅಪಘಾತವಾಗಿರಬಹುದು ಎಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

13. ಚಾಸಾ.3/ಪ್ರಾಸಾ.2 ನಾಗರಾಜು ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮೃತ ಜಂದಲಿ ವೀರಪ್ಪ ರವರು ಗೊತ್ತು ಎಂದು ಸದರಿ ಈರಪ್ಪ ರಸ್ತೆ ಅಪಘಾತದಲ್ಲಿ ಮೃತ ಪಟ್ಟಿದ್ದಾನೆಂದು ಅಂದಾಜು 3 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ನಿಪಿ–1 ಕ್ಕೆ ಸಹಿ ಮಾಡಿರುತ್ತಾರೆಂದು ನಿಪಿ–10 ರಂತೆ ಒಂದು ಶವತನಿಖಾ ಪಂಚನಾಮೆ ತೋರಿಸಲಾಗಿ ಸದರಿ ದಾಖಲೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತಾರೆಂದು ನಿಪಿ–10 ಕ್ಕೆ ಮೂರು ವರ್ಷಗಳ ಹಿಂದೆ ಪೊಲೀಸರು ಅವರ ಸಹಿ ಪಡೆದಿರುತ್ತಾರೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

**14.** ಚಾಸಾ.13/ಪ್ರಾಸಾ.5 ಖಲೀಲ್ ಉಲ್ಲಾ ಎಂ ಹೆಚ್ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 25.10.2020 ರಂದು 9.45 ಗಂಟೆ ಸಮಯದಲ್ಲಿ ಅವರು ಠಾಣೆಯಲ್ಲಿದ್ದಾಗ ಚಾಸಾ.1 ರವರು ಠಾಣೆಗೆ ಬಂದು ಮೃತ ಜಂಗ್ಲಿ ವೀರಪ್ಪನವರು ಅಪಘಾತದಿಂದ ಮೃತಪಟ್ಟಿದ್ದಾರೆಂದು ಹೆಚ್ಚುವರಿ ಹೇಳಿಕೆ ನೀಡಿದ್ದು ಅವರು ಅದನ್ನು ಸ್ವೀಕರಿಸಿ ನ್ಯಾಯಾಲಯಕ್ಕೆ ಕೋರಿಕೆ ಅರ್ಜಿಯನ್ನು ಸಲ್ಲಿಸಿ ಕಲಂ.304(ಎ) ರಡಿಯಲ್ಲಿ

ಅಳವಡಿಸಿಕೊಳ್ಳಲು ಮನವಿ ನೀಡಿರುತ್ತಾರೆಂದು ನಿಪಿ-12 ರಂತೆ ಕೋರಿಕೆ ಪತ್ರದಲ್ಲಿ ಅವರ ಸಹಿಯನ್ನು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

**15.** ಚಾಸಾ.2/ಪ್ರಾಸಾ.6 ಮಹೇಶ್ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅವರಿಗೆ ಚಾಸಾ.1 ರವರು ಪರಿಚಯವಿದ್ದಾರೆ ಎಂದು ಮೃತ ಜಂಗಲಿ ಈರಪ್ಪ ರವರು ಬೈಕ್ ಅಪಘಾತದಲ್ಲಿ ಮೃತಪಟ್ಟಿದ್ದಾರೆಂದು 4 ವರ್ಷಗಳ ಹಿಂದೆ ಯಲ್ಲದಕೆರೆಗೆ ಆರೋಗ್ಯ ಸರಿ ಇಲ್ಲದ ಕಾರಣ ಆಸ್ಪತ್ರೆಗೆ ಹೋಗಿದ್ದರೆಂದು ಆಸ್ಪತ್ರೆಯಿಂದ ಅವರ ತಾತ ಅವರಿಗೆ ಫೋನ್ ಮಾಡಿ ಅವರನ್ನು ಕರೆದುಕೊಂಡು ಹೋಗಿ ಎಂದು ತಿಳಿಸಿದ್ದು ಅವರು ಹೋಗುವಷ್ಟರಲ್ಲಿ ಅವರ ತಾತನಿಗೆ ಯಾರೋ ಒಬ್ಬ ವ್ಯಕ್ತಿ ಬೈಕ್ ನಿಂದ ಡಿಕ್ಕಿ ಪಡಿಸಿದ್ದು ಅವರ ತಾತ ಬಿದ್ದಿದ್ದು ಜನರು ಸೇರಿದ್ದರೆಂದು ನಂತರ ಅವರನ್ನು ಕರೆದುಕೊಂಡು ಯಲ್ಲದಕೆರೆ ಆಸ್ಪತ್ರೆಗೆ ಹೋಗಿರುತ್ತಾರೆಂದು ಯಲ್ಲದಕೆರೆ ಬಸ್ ನಿಲ್ದಾಣದ ಹತ್ತಿರ ಅಪಘಾತವಾಗಿರುತ್ತದೆ ಎಂದು ಅವರ ತಾತನ ಸೊಂಟ, ಕೈಕಾಲುಗಳಿಗೆ ಪೆಟ್ಟಾಗಿರುತ್ತದೆಂದು ಚಾಸಾ.1 ರವರಿಗೆ ಫೋನ್ ಮಾಡಿ ವಿಷಯ ತಿಳಿಸಿರುತ್ತಾರೆಂದು ಅವರ ಮಗ ಬಂದು ಹಿರಿಯೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

**16.** ಚಾಸಾ.12/ಪ್ರಾಸಾ.7 ಗೌರೀಶ್ ಎಸ್ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ03.10.2020 ರಂದು 4 ಗಂಟೆ ಸಮಯದಲ್ಲಿ ಅವರು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ.1 ರವರು ಹಾಜರಾಗಿ ನಿಪಿ-1 ರಂತೆ ನೀಡಿದ ದೂರನ್ನು ಸ್ವೀಕರಿಸಿದ್ದು ಠಾಣಾ ನಂ.300/2020 ರಂತೆ ಪ್ರಕರಣ ದಾಖಲಿಸಿ ನಿಪಿ-15 ರಂತೆ ಪ್ರ ವ ವರದಿ ತಯಾರಿಸಿರುತ್ತಾರೆಂದು ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಪಂಚನಾಮೆ ತಯಾರಿಸಿದ್ದು ಪಂಚರಾದ ಚಾಸಾ.4 ಮತ್ತು 5 ರವರ ಸಮಕ್ಷಮ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ

ಪಂಚನಾಮೆ ತಯಾರಿಸಿ ಕಚ್ಚಾ ನಕಾಶೆ ತಯಾರಿಸಿರುತ್ತಾರೆಂದು, ಒಂದು ಪೋಟೋ ತೆಗೆಸಿದ್ದು ಎಪಿ-39 ಬಿ 4826 ವಾಹನವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆಂದು, ದಿಃ03.10.2021 ರಂದು ಠಾಣೆಗೆ ವಾಪಸ್ಸು ಬಂದು ಚಾಸಾ.2 ರವರ ಹೇಳಿಕೆ ಪಡೆದಿರುತ್ತಾರೆಂದು ದಿಃ10.10.2021 ರಂದು ಐ.ಎಂ.ವಿ ತಪಾಸಣೆಗಾಗಿ ವಾಹನವನ್ನು ತಾಂತ್ರಿಕ ಪರೀಕ್ಷೆಗಾಗಿ ಚಾಸಾ.10 ರವರಿಗೆ ಮನವಿ ಮಾಡಿಕೊಂಡಿರುತ್ತಾರೆಂದು ದಿಃ22.10.2022 ರಂದು ಪ್ರಕರಣದ ಆರೋಪಿಯಾದ ಗೋಪಾಲಪ್ಪ ನವರು ಠಾಣೆಗೆ ಹಾಜರಾದ ಮೇರೆಗೆ ಅವರ ವಿರುದ್ದ ದಸ್ತಗಿರಿ ಕ್ರಮ ಕೈಗೊಂಡು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆಂದು ಅದೇ ದಿನ ಚಾಸಾ.1 ರವರ ಮರು ಹೇಳಿಕೆ ಪಡೆದಿರುತ್ತಾರೆಂದು ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ.13 ರವರಿಗೆ ವಹಿಸಿಕೊಟ್ಟಿರುತ್ತಾರೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

**17.** ಚಾಸಾ.15/ಪ್ರಾಸಾ.8 ರಾಘವೇಂದ್ರ ಕೆ ಆರ್ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 25.10.2021 ರಂದು ಈ ಪ್ರಕರಣದ ಕಡತವನ್ನು ಚಾಸಾ.13 ರವರಿಂದ ಪಡೆದುಕೊಂಡಿರುತ್ತಾರೆಂದು ಅದೇ ದಿನ ಚಾಸಾ.2 ರವರ ಹೇಳಿಕೆ ಮತ್ತು ಚಾಸಾ.3 ರವರ ಮರು ಹೇಳಿಕೆ ಪಡೆದಿದ್ದು ದಿಃ02.12.2020 ರಂದು ಚಾಸಾ-11 ರವರಿಂದ ನಿಪಿ-16 ರಂತೆ ಮೃತ ಜಂಗಲಿ ಈರಣ್ಣನವರು ಪಿ ಎಂ ವರದಿಯನ್ನು ಪಡೆದಿದ್ದು ದಿಃ04.01.2021 ರಂದು ಚಾಸಾ.10 ರವರಿಂದ ನಿಪಿ-17 ರಂತೆ ಐ ಎಂ ವಿ ವರದಿ ಪಡೆದಿರುತ್ತಾರೆಂದು ದಿಃ22.01.2021 ರಂದು ಆರ್ ಸಿ ಮಾಲಿಕರಾದ ಚಾಸಾ.9 ರವರಿಗೆ ನಿಪಿ-18 ರಂತೆ ಕಲಂ 133 ರಂತೆ ನೋಟೀಸ್ ಜಾರಿ ಮಾಡಿ ಉತ್ತರ ಪಡೆದಿರುತ್ತಾರೆಂದು ಉತ್ತರವನ್ನು ನಿಪಿ-19 ಎಂದು ನಿಪಿ-20 ರಂತೆ ಇಂಡಮ್ನಿಟಿ ಬಾಂಡನ್ನು ಪಡೆದಿರುತ್ತಾರೆಂದು ಸದರಿ ವಾಹನವನ್ನು ಆರೋಪಿಯು ಚಾಲನೆ ಮಾಡುತ್ತಿದ್ದರೆಂದು ಉತ್ತರದಲ್ಲಿ ತಿಳಿಸಿರುತ್ತಾರೆಂದು ಅದೇ ದಿನ ತನಿಖೆ ಪೂರ್ಣಗೊಳಿಸಿ

ಆರೋಪಿಯ ವಿರುದ್ದ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

**18.** ಚಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸದರಿ ಬೈಕ್ ನಂಬರ್ ಗೊತ್ತಿಲ್ಲ ಮತ್ತು ಅಪಘಾತ ಹೇಗಾಯಿತು ಎಂದು ನೋಡಿಲ್ಲ ಆ ದಿನ ಬೈಕನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ ಅದೇ ರೀತಿ ಬೈಕ್ ಚಾಲಕ ಯಾವ ರೀತಿ ಮತ್ತು ಎಷ್ಟು ವೇಗದಿಂದ ಚಾಲನೆ ಮಾಡುತ್ತಿದ್ದರು ಎಂದು ಕೇಳಿ ತಿಳಿದುಕೊಂಡಿರುವುದಿಲ್ಲ, ಪೊಲೀಸ್ ಠಾಣೆಯಲ್ಲಿ ವಾಹನವನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದು ನುಡಿದಿದ್ದು ಅವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದಾಗ ತಮ್ಮ ಪಾಟೀ ಸವಾಲಿನಲ್ಲಿ ಅಪಘಾತವಾದ ಸಮಯದಲ್ಲಿ ಅವರು ಮನೆಯಲ್ಲಿಯೇ ಇದ್ದರು ಎಂದು ಅವರಿಗೆ ಬೇರೆಯವರ ಮುಖಾಂತರ ಅಪಘಾತದ ವಿಚಾರ ಗೊತ್ತಾಯಿತು ಅಪಘಾತವನ್ನು ಅವರು ಕಣ್ಣಾರೆ ನೋಡಿಲ್ಲವೆಂದು ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ಅವರಿಗೆ ಗೊತ್ತಿಲ್ಲ ಎಂದರೆ ನಿಜವೆಂದು, ಆರೋಪಿಯನ್ನು ಈ ಹಿಂದೆ ಎಲ್ಲಿಯೂ ನೋಡಿಲ್ಲವೆಂದು ಮಹಜರ್ ನಲ್ಲಿ ಏನು ಬರೆಯಲಾಗಿದೆ ಎಂದರೆ ಗೊತ್ತಿಲ್ಲವೆಂದು ಅವರು ಯಾವುದೇ ವಾಹನವನ್ನು ವಶಪಡಿಸಿಕೊಂಡಿರುವುದು ನೋಡಿಲ್ಲವೆಂದು ಅವರು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ನಿಜವೆಂದು ನುಡಿದಿರುತ್ತಾರೆ.

19. ಚಾಸಾ.2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಬಗ್ಗೆ ಅವರಿಗೆ ಯಾವುದೇ ಮಾಹಿತಿ ಇಲ್ಲ ಆದರೆ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಅವರಿಗೆ ದೂರು ಬರೆಯಲು ಹೇಳಿದ್ದರಿಂದ ಅವರು ದೂರು ಬರೆದಿರುತ್ತಾರೆಂದು ದೂರು ಯಾವ ವಿಚಾರಕ್ಕೆ ಬರೆದಿದ್ದಾರೆಂದು ಗೊತ್ತಿಲ್ಲವೆಂದು ಅವರ ಸಮಕ್ಷಮ ಪೊಲೀಸರು ಯಾವುದೇ ಕ್ರಮ

ಜರುಗಿಸಿಲ್ಲವೆಂದು ನುಡಿದಿದ್ದು ಅವರನ್ನು ಅಭಿಯೋಜನೆಯವರು ಪಾಟೀ ಸವಾಲು ಮಾಡಿ ದಿಃ02.10.2020 ರಂದು ರಾತ್ರಿ 8.15 ಗಂಟೆಗೆ ಜಂಗ್ಲಿ ಈರಪ್ಪ ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದು ಚಿಕಿತ್ಸೆಗಾಗಿ ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದರು ಎಂದರೆ ನಿಜವೆಂದು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ನಿಜವೆಂದು ಸದರಿ ಘಟನೆ ಬಗ್ಗೆ ಈಗ ಅವರಿಗೆ ಓದಿ ಹೇಳಿದ ನಿಪಿ-1 ರಂತೆ ಮೃತ ಜಂಗ್ಲಿ ಈರಪ್ಪನ ಮಗ ಶಿವಕುಮಾರ್ ಮಾಹಿತಿ ಕೊಟ್ಟಂತೆ ದೂರು ಬರೆದು ಸಹಿ ಮಾಡಿದ್ದೇನೆಂದರೆ ಸರಿಯಲ್ಲವೆಂದು ಸಾಕ್ಷಿ ಸದರಿ ದೂರು ಬರೆಯಲು ಪೊಲೀಸರು ಮಾಹಿತಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆಂದು ಸದರಿ ಜಂಗ್ಲಿ ಈರಪ್ಪನು ಚಿತ್ರದುರ್ಗದ ಆಸ್ಪತ್ರೆಯಲ್ಲಿ ಗುಣಮುಖನಾಗದೇ ಬಿಡುಗಡೆ ಹೊಂದಿ ಮನೆಯಲ್ಲಿ ಇರುವಾಗ ದಿಃ24.10.2020 ರಂದು ಮೃತ ಪಟ್ಟಿದ್ದಾನೆ ಎಂದರೆ ಗೊತ್ತಿಲ್ಲವೆಂದು ಸದರಿ ಜಂಗ್ಲಿ ಈರಪ್ಪನ ಮೃತ ದೇಹ ಶವ ತನಿಖೆ ಮಾಡಲು ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಆಗ ತನಿಖಾಧಿಕಾರಿ ನಿಪಿ-10 ರಂತೆ ದಾಖಲೆ ತಯಾರಿಸಿ ಆಸ್ಪತ್ರೆಯಲ್ಲಿ ಅವರ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲವೆಂದು ನುಡಿದಿರುತ್ತಾರೆ .

20. ಪ್ರಾಸಾ.3 ಮತ್ತು 4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅವರ ಸಮಕ್ಷಮ ಪೊಲೀಸರು ಯಾವುದೇ ವಾಹನವನ್ನು ಅಮಾನತು ಪಡಿಸಿಕೊಂಡಿಲ್ಲವೆಂದು ನುಡಿದಿದ್ದು ಅವರನ್ನು ಅಭಿಯೋಜನೆಯವರು ಪಾಟೀ ಸವಾಲು ಮಾಡಿ ದಿಃ03.10.2023 ರಂದು ಯಲ್ಲದಕೆರೆ ಬಸ್ ನಿಲ್ದಾಣದ ಬಳಿ ಅಪಘಾತಕ್ಕೆ ಸಂಬಂಧಪಟ್ಟಂತೆ ಪೊಲೀಸರು ಮಹಜರ್ ಮಾಡಿ ಎಪಿ.39 ಬಿ ಜಡ್ 4826 ನ್ನು ವಶಪಡಿಸಿಕೊಂಡು ಅವರ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲವೆಂದು ಮಹಜರ್ ಮಾಡುವಾಗ ನಿಪಿ-5 ನ್ನು ತೆಗೆಸಿದ್ದಾರೆ ಎಂದರೆ ಸರಿಯಲ್ಲವೆಂದು

ಅವರ ಸಮಕ್ಷಮ ನಿಪಿ-3 ಮತ್ತು 4 ನ್ನು ತಯಾರಿಸಿದ್ದಾರೆ ಎಂದರೆ ಸರಿಯಲ್ಲವೆಂದು ನುಡಿದಿರುತ್ತಾರೆ

21. ಫ್ರಾಸಾ.6 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅವರು ಹೋಗುವಷ್ಟರಲ್ಲಿ ಅವರ ತಾತನಿಗೆ ಯಾವುದೇ ಒಬ್ಬ ವ್ಯಕ್ತಿ ಬೈಕಿನಲ್ಲಿ ಡಿಕ್ಕಿ ಪಡಿಸಿದರೆಂದು ಅವರ ತಾತ ಬಿದ್ದಿದ್ದರಿಂದ ಜನ ಸೇರಿದ್ದರಿಂದ ಅಪಘಾತ ಹೇಗಾಯಿತು ಎಂದು ಮತ್ತು ಯಾರ ತಪ್ಪಿನಿಂದ ಆಯಿತು ಎಂದರೆ ಗೊತ್ತಿಲ್ಲವೆಂದು ಈ ಬಗ್ಗೆ ಪೊಲೀಸ್ ಅವರ ಹೇಳಿಕೆಯನ್ನು ಪಡೆದುಕೊಂಡಿದ್ದಾರೆಂದು ನುಡಿದಿದ್ದು ಅವರನ್ನು ಅಭಿಯೋಜನೆಯವರು ಪಾಟೀ ಸವಾಲು ಮಾಡಿ ದಿಃ02.10.2020 ರಂದು ಸುಮಾರು 4 ಗಂಟೆ ಸಮಯದಲ್ಲಿ ಅವರ ತಾತ ಯಲ್ಲದಕೆರಗೆ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿದ್ದರು ಎಂದರೆ ನಿಜವೆಂದು ಸುಮಾರು ರಾತ್ರಿ 8.15 ರ ಸಮಯದಲ್ಲಿ ಅವರ ತಾತ ನಡೆದುಕೊಂಡು ಹೋಗುತ್ತಿರುವಾಗ ಕೆ ಕೆ ಹಟ್ಟಿ ಗ್ರಾಮದ ಕಡೆಯಿಂದ ಒಂದು ಬೈಕ್ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಅವರ ತಾತ ಜಂಗ್ಲಿ ಈರಪ್ಪನಿಗೆ ಡಿಕ್ಕಿ ಪಡಿಸಿದ್ದರಿಂದ ಅವರ ತಾತ ಸ್ಥಳದಲ್ಲಿ ಕುಸಿದು ಬಿದ್ದಿದ್ದು ಮೋಟರ್ ಸೈಕಲ್ ನ್ನು ಪಕ್ಕಕ್ಕೆ ನಿಲ್ಲಿಸಿ ಹತ್ತಿರ ಹೋಗಿ ನೋಡಲಾಗಿ ಅವರ ಎಡಗಾಲಿಗೆ ಸೊಂಟಕ್ಕೆ ಮೈಕೈಗೆ ಪೆಟ್ಟುಗಳು ಬಿದ್ದು ರಕ್ತಗಾಯಗಳಾಗಿದ್ದು ಮೋಟಾರ್ ವಾಹನ ನಂ. ಎಪಿ.39 ಬಿ ಜಡ್ 4826 ರ ಚಾಲಕ ಬೈಕನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಿದ್ದಾನೆ ಎಂದರೆ ಸರಿಯಲ್ಲವೆಂದು ಅವರು ಪೊಲೀಸರಿಗೆ ನಿಪಿ-13 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲವೆಂದು ದಿಃ25.10.2020 ರಂದು ಮೋಟಾರ್ ಸೈಕಲ್ ಚಾಲಕ ಗೋಪಾಲಪ್ಪ ತಂದೆ ಚಿಕ್ಕಣ್ಣ, ಜಿರಾಯ್ತಿ ಕೆಲಸ , ಕೆ ಕೆ ಹಟ್ಟಿ ಗ್ರಾಮ ಹಿರಿಯೂರು ಎಂದು ಗೊತ್ತಾಯಿತು ಎಂದರೆ ಸರಿಯಲ್ಲವೆಂದು ನುಡಿದಿರುತ್ತಾರೆ.

22. ಈ ಪ್ರಕರಣದಲ್ಲಿ ಚಾಸಾ.2 / ಫ್ರಾಸಾ.6 ರವರು ಪತ್ಯಕ್ಷ ಸಾಕ್ಷಿದಾರರಾಗಿದ್ದು ಫ್ರಾಸಾ.6 ರವರು ಸ್ವತಃ ಮೃತ ವ್ಯಕ್ತಿಯ ಮೊಮ್ಮಗನಾಗಿದ್ದು ಆದರೆ ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅವರ ಅಪಘಾತವನ್ನು ನೋಡಿಲ್ಲ ಯಾರ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಗೊತ್ತಿಲ್ಲವೆಂದು ಸಂಪೂರ್ಣವಾಗಿ ವ್ಯತಿರಿಕ್ತ ಸಾಕ್ಷ್ಯಯನ್ನು ನುಡಿದಿದ್ದು ಅಭಿಯೋಜನೆಗೆ ಪೂರಕವಾಗಿ ಯಾವುದೇ ಸಾಕ್ಷವು ನ್ಯಾಯಾಲದಲ್ಲಿ ಇರುವುದಿಲ್ಲ. ಆದ್ದರಿಂದ ಯಾವುದೇ ಒಬ್ಬ ಸಾಕ್ಷಿದಾರರೂ ಕೂಡ ಅಭಿಯೋಜನೆಗೆ ಪೂರಕವಾದ ಸಾಕ್ಷ್ಯವನ್ನು ನುಡಿದಿರುವುದಿಲ್ಲ . ಆದ್ದರಿಂದ ಆರೋಪಿಯ ತಪ್ಪಿನಿಂದ ಈ ಅಪಘಾತವಾಗಿದೆ ಎನ್ನುವ ಬಗ್ಗೆ ನ್ಯಾಯಾಲಯಕ್ಕೆ ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ. ಯಾವುದಾದರೂ ಸಂಶಯ ಬಂದಲ್ಲಿ ಅದರ ಲಾಭವು ಆರೋಪಿತರಿಗೆ ಸಲ್ಲತಕ್ಕದ್ದು ಆದ್ದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡುತ್ತಾ ಅಭಿಯೋಜನೆಯವರು ಆರೋಪಿತಯ ವಿರುದ್ಧ ಹೊರಿಸಲಾದ ಆರೋಪವನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತಾರೆಂದು ನಿರ್ಣಯಿಸಿ ಅಂಶ 1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**29. <u>ಅಂಶ ನಂ.4</u>** ಮೇಲ್ಕಂಡ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

## <u>ಆದೇಶ</u>

ಆರೋಪಿತರ ಮೇಲಿನ ಆಪಾದನೆ ಸಾಬೀತಾಗಿರುವುದಿಲ್ಲ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **255(1)** ರ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತನ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ ಕಲಂ **279, 304(ಎ)** ರಡಿಯಲ್ಲಿ ಎಸಗಿದ ಆಪಾದನೆಯಿಂದ ದೋಷ ಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಈ ಪ್ರಕರಣದಲ್ಲಿ ಆರೋಪಿ ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ತೀರ್ಪು ಉದ್ಘೋಷಿಸಿದ ದಿನದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ದಿಃ 01.04.2026 ರಂದು ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

**ಃಅನುಬಂಧಃ**

## I ಪಿರ್ಯಾದುದಾರರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ-

ಪ್ರಾಸಾ-1 ಃ ಶಿವಕುಮಾರ್
ಪ್ರಾಸಾ-2 ಃ ನಾಗರಾಜು
ಪ್ರಾಸಾ-3 ಃ ಶಾಂತಿಕುಮಾರ್
ಪ್ರಾಸಾ-4 ಃ ರಂಗಪ್ಪ
ಪ್ರಾಸಾ-5 ಃ ಖಲೀಲ್ ಉಲ್ಲಾ ಎಂ ಹೆಚ್
ಪ್ರಾಸಾ-6 ಃ ಮಹೇಶ್
ಪ್ರಾಸಾ-7 ಃ ಗೌರೀಶ್ ಎಸ್
ಪ್ರಾಸಾ-8 ಃ ರಾಘವೇಂದ್ರ ಕೆ ಆರ್

## II ಪಿರ್ಯಾದುದಾರರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ-

ನಿ.ಪಿ-1 ಃ ದೂರು,

ನಿ.ಪಿ–1(ಎ) ಃ ಫ್ರಾಸಾ.1 ರವರ ಸಹಿ,

ನಿ.ಪಿ–1(ಬಿ) ಃ ಫ್ರಾಸಾ.2 ರವರ ಸಹಿ ,

ನಿ.ಪಿ–1(ಸಿ) ಃ ಫ್ರಾಸಾ.7 ರವರ ಸಹಿ,

ನಿ.ಪಿ–2 ಃ ಪಿರ್ಯಾದಿಯ ಮರು ದೂರು,

ನಿ.ಪಿ–2(ಎ) ಃ ಫ್ರಾಸಾ.1 ರವರ ಸಹಿ,

ನಿ.ಪಿ–2(ಬಿ) ಃ ಫ್ರಾಸಾ.3 ರವರ ಸಹಿ,

ನಿ.ಪಿ–3 ಃ ಸ್ಥಳ ಪಂಚನಾಮೆ,

ನಿ.ಪಿ–3(ಎ) ಃ ಫ್ರಾಸಾ.1 ರವರ ಸಹಿ ,

ನಿ.ಪಿ–3(ಬಿ) ಃ ಫ್ರಾಸಾ.3 ರವರ ಸಹಿ,

ನಿ.ಪಿ–3(ಸಿ) ಃ ಫ್ರಾಸಾ.4 ರವರ ಸಹಿ,

ನಿ.ಪಿ–3(ಡಿ) ಃ ಫ್ರಾಸಾ.7 ರವರ ಸಹಿ,

ನಿ.ಪಿ–4 ಃ ಕಚ್ಚಾ ನಕಾಶೆ,

ನಿ.ಪಿ–4(ಎ) ಃ ಫ್ರಾಸಾ.1 ರವರ ಸಹಿ,

ನಿ.ಪಿ–4(ಬಿ) ಃ ಫ್ರಾಸಾ.3 ರವರ ಸಹಿ,

ನಿ.ಪಿ–4(ಸಿ) ಃ ಫ್ರಾಸಾ.4 ರವರ ಸಹಿ,

ನಿ.ಪಿ–4(ಡಿ) ಃ ಫ್ರಾಸಾ.7 ರವರ ಸಹಿ,

ನಿ.ಪಿ–5 ರಿಂದ 9ಃ ಛಾಯಾಚಿತ್ರಗಳು,

ನಿ.ಪಿ–10 ಃ ವಾಹನ ಪರಿಶೀಲನಾ ಪಂಚನಾಮೆ,

ನಿ.ಪಿ–10(ಎ) ಃ ಫ್ರಾಸಾ.2 ರವರ ಸಹಿ,

ನಿ.ಪಿ–11 ಃ ಫ್ರಾಸಾ.2 ರವರ ಹೇಳಿಕೆ,

ನಿ.ಪಿ–12 ಃ ಮನವಿ ಪತ್ರ ,

ನಿ.ಪಿ–12(ಎ) ಃ ಫ್ರಾಸಾ.2 ರವರ ಸಹಿ,

ನಿ.ಪಿ–13 ಃ ಫ್ರಾಸಾ.6 ರವರ ಹೇಳಿಕೆ,

ನಿ.ಪಿ–14 ಃ ಫ್ರಾಸಾ.6 ರವರ ಹೆಚ್ಚುವರಿ ಹೇಳಿಕೆ,

ನಿ.ಪಿ–15 ಃ ಪ್ರ.ವ ವರದಿ,

ನಿ.ಪಿ–15(ಎ) ಃ ಫ್ರಾಸಾ.7 ರವರ ಸಹಿ,

ನಿ.ಪಿ–16 ಃ ಶವ ಪರೀಕ್ಷೆ ವರದಿ,

ನಿ.ಪಿ–16(ಎ) ಃ ಫ್ರಾಸಾ.8 ರವರ ಸಹಿ,

ನಿ.ಪಿ–17 ಃ ಐ ಎಂ ವಿ ವರದಿ,

| | | |
|---|---|---|
| ನಿ.ಪಿ–17(ಎ) | ಃ | ಫ್ರಾಸಾ.8 ರವರ ಸಹಿ, |
| ನಿ.ಪಿ–18 | ಃ | ಕಲಂ 133 ಐ.ಎಂ.ವಿ ಆಕ್ಟ್ ನೊಟೀಸ್, |
| ನಿ.ಪಿ–18(ಎ) | ಃ | ಫ್ರಾಸಾ.8 ರವರ ಸಹಿ, |
| ನಿ.ಪಿ–19 | ಃ | ನೋಟಿಸ್ ಗೆ ನೀಡಿದ ಉತ್ತರ, |
| ನಿ.ಪಿ–19(ಎ) | ಃ | ಫ್ರಾಸಾ.8 ರವರ ಸಹಿ, |
| ನಿ.ಪಿ–20 | ಃ | ಇಂಡಿಮ್ನಿಟಿ ಬಾಂಡ್, |
| ನಿ.ಪಿ–20(ಎ) | ಃ | ಫ್ರಾಸಾ.8 ರವರ ಸಹಿ, |

**III ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ–**

–ಇಲ್ಲಾ–

**IV ಆರೋಪಿತರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ–**

–ಇಲ್ಲಾ–

**V ಅಭಿಯೋಜನೆಯ ಪರ ಮುದ್ದೆ ಮಾಲುಗಳು –**

–ಇಲ್ಲಾ–

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

Visit **ecourts.gov.in** for updates or download mobile app "**eCourts Services**" from Android or iOS

SUJATHA SUVARNA B

Digitally signed by SUJATHA SUVARNA B
Date: 2026.04.05 09:52:56 +0530